1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

S.C.68/2017

ದಿಃ 03.12.2022

(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-12 Pw-12

| | | |
|---|---|---|
| ಹೆಸರು | ಃ | ಚಂದ್ರಮ್ಮ |
| ಗಂಡನ ಹೆಸರು | ಃ | ವೆಂಕಟರಾಮು |
| ವಯಸ್ಸು | ಃ | 62 ವರ್ಷ |
| ಉದ್ಯೋಗ | ಃ | ಗೃಹಿಣಿ |
| ವಾಸಸ್ಥಳ | ಃ | ಮಾಗಡಿ |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನನ್ನ ಮನೆ ಸುಣ್ಣಕಲ್ಲು ಬೀದಿಯಲ್ಲಿ ಇರುತ್ತದೆ.

2. ನೂರುಲ್ಲಾ ಈತನ ಮಗಳು ಬಿಬಿ ಆಯೀಷಾ ನನಗೆ ಗೊತ್ತು.

3. ಅವಳು ಕಾಲವಾಗಿರುತ್ತಾಳೆ.

4. ಈಗ ಸುಮಾರು 6 ವರ್ಷಗಳ ಹಿಂದೆ, ಒಂದು ದಿನ ಅಂದರೆ ಕಾಣೆಯಾದ ದಿನ ರಾತ್ರಿ ಸುಮಾರು 8.00-8.30ರ ಸಮಯದಲ್ಲಿ ಸದರಿ ಬಿಬಿ ಆಯೀಷಾ ಇವಳನ್ನು ನಮ್ಮ ಮನೆಯ ಮುಂದೆ ಸ್ವಲ್ಪ ದೂರದಲ್ಲಿ ಅವಳೊಂದಿಗೆ ಒಬ್ಬ ಹುಡುಗ ಇರುವುದನ್ನು ನೋಡಿರುತ್ತೇನೆ.

5. ನಂತರ ನಾನು ಕೆಲಸಗಾರರಿಗೆ ಚಹಾ ಕೊಟ್ಟಿರುತ್ತೇನೆ.

6. ಬಿಬಿ ಆಯೀಷಾ ಇವಳೊಂದಿಗೆ ನಿಂತಿದ್ದ ಹುಡುಗನನ್ನು ನಾನು ಈಗ ನೋಡಿದರೆ ಗುರುತಿಸಲು ಆಗುವುದಿಲ್ಲ.

7. ನನ್ನನ್ನು ಯಾವ ಕಾಲಕ್ಕೂ ಯಾವುದೇ ರೀತಿಯಲ್ಲಿ ವಿಚಾರಣೆ ಮಾಡಿರುವುದಿಲ್ಲ ಮತ್ತು ನನ್ನಿಂದ ಯಾವುದೇ ಹೇಳಿಕೆಗಳನ್ನು ದಾಖಲಿಸಿಕೊಂಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ. ಅದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)**

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

8. ಬಿಬಿ ಆಯೀಷಾ ಮನೆಗೆ ಬಂದಿಲ್ಲ ಎಂದು ಹುಡುಕುತ್ತಿದ್ದರು ಎನ್ನುವುದು ಸರಿ.

9. ಈಗ ನನಗೆ ಓದಿ ಹೇಳಿದ ನಿ.ಪಿ.12 ರಂತೆ “ದಿಃ01.03.2017 ರಂದು ರಾತ್ರಿ ಸುಮಾರು 9.00 ಗಂಟೆ ಸಮಯದಲ್ಲಿ ನಾನು ನಮ್ಮ ಮನೆಯ ವರಾಂಡದಲ್ಲಿ ನಿಂತಿ ಬಿಸಿ ನೀರು

.....................................

.....................................

.....................................

.......................................

ಈ ಬಗ್ಗೆ ಕೊಲೆ ಕೇಸು ದಾಖಲಾಗಿರುತ್ತೆ ಎಂಬ ವಿಚಾರ ತಿಳಿದಿರುತ್ತೆ" ಎಂದು ದಿ:04.03.2017 ರಂದು ಪೊಲೀಸರ ಮುಂದೆ ನಾನು ಹೇಳಿಕೆ ನೀಡಿರುತ್ತೇನೆಂದು ಸೂಚಿಸುವುದು ಸರಿಯಲ್ಲ.

9. ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಪಾಟೀ ಸವಾಲು: ಶ್ರೀ. ಎಂ.ಎಂ., ವಕೀಲರಿಂದ ಆರೋಪಿಗಳ ಪರವಾಗಿ:</u>

10. ನಮ್ಮ ಮನೆ ಮೊದಲ ಅಂತಸ್ತಲ್ಲಿ ಇದ್ದು, ನೆಲ ಅಂತಸ್ತಲ್ಲಿ ಸಿಲ್ಕ್ ಶಿಫ್ಟಿಂಗ್ ಫ್ಯಾಕ್ಟರಿ ಇರುತ್ತದೆ ಎನ್ನುವುದು ಸರಿ.

11. ನಮ್ಮ ಮನೆಯ ಮುಂದೆ ಇರುವ ರಸ್ತೆಯಲ್ಲಿ ಸಾಕಷ್ಟು ಜನಸಂದಣಿ ಇರುತ್ತದೆ ಎನ್ನುವುದು ಸರಿ.

12. ಸದರಿ ಬಿಬಿ ಆಯೀಷಾ ಇವಳ ಅಂಗಡಿ ನಮ್ಮ ಮನೆಯಿಂದ ಸುಮಾರು 10-15 ಅಡಿಗಳ ಅಂತರದಲ್ಲಿ ಇರುತ್ತದೆ.

13. ಸದರಿ ಬಿಬಿ ಆಯೀಷಾ ಇವಳ ತಂದೆ-ತಾಯಿ ತಮ್ಮ ಅಂಗಡಿಯಲ್ಲಿ ರಾತ್ರಿ 9.00-9.30 ರವರೆಗೆ ಇರುತ್ತಾರೆ.

14. ನಾನು ಕೆಳಗೆ ಕಾರ್ಮಿಕರಿಗ ಚಹಾ ಕೊಡಲು ಹೋದಾಗ ಬಿಬಿ ಆಯೀಷಾ ಒಬ್ಬ ಮುಸಸ್ಲಿಂ ಹುಡುಗನೆಜದಿಗೆ ನಿಂತಿರುವುದನ್ನು ನೋಡಿರುತ್ತೇನೆ.

15. ಆತನು ಯಾರು ಎಂಬುದು ಗೊತ್ತಿಲ್ಲ.

16. ನಮ್ಮ ಮನೆಯ ಮುಂದೆ ಇರುವ ರಸ್ತೆಯಲ್ಲಿ ಜನಸಂದಣಿ ಇವುದರಿಂದ ಯಾರು ಹೋಗುತ್ತಾರೆ ಯಾರು ಬರುತ್ತಾರೆ ಎಂಬುದು ತಿಳಿಯುವುದಿಲ್ಲ ಎನ್ನುವುದು ಸರಿ.

17. ಅದೇ ರೀತಿ ಸದರಿ ಬಿಬಿ ಆಯೀಷಾ ಎಲ್ಲಿ ಹೋದಳು, ಏನಾದಳು ಎಂದು ನನಗೆ ಗೊತ್ತಿಲ್ಲ ಎನ್ನುವುದು ಸರಿ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.